(ಇಂದು ದಿನಾಂಕ 14-12-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ – ವಾದಿ ಪರ ಶ್ರೀ ಎಂ.ಎನ್.ಎಸ್. ವಕೀಲರಿಂದ–**

ದಿನಾಂಕ 13-06-2018 ರಂದು ವಾದಿಯು ಪ್ರತಿವಾದಿಯರ ವಿರುದ್ಧ ನೀಡಿದ ಫಿರ್ಯಾದಿಯ ದೃಢೀಕೃತ ಪ್ರತಿಯನ್ನು ನಿ.ಪಿ. 9 ಎಂತಲೂ, ದಿನಾಂಕ 13-06-2018 ರಂದು ಕುಮಟಾ ಪೊಲೀಸರು ಫಿರ್ಯಾದನ್ನು ಸ್ವೀಕರಿಸಿದ ಕುರಿತು ನೀಡಿದ ಸ್ವೀಕೃತಿಯನ್ನು ನಿ.ಪಿ. 10 ಎಂತಲೂ, 1 ನೇ ಪ್ರತಿವಾದಿಯರು ಕುಮಟಾ ಪೊಲೀಸ್ ಠಾಣೆಯಲ್ಲಿ ನೀಡಿದ ಹೇಳಿಕೆಯ ದೃಢೀಕೃತ ಪ್ರತಿಯನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿ.ಪಿ. 11 ಎಂದು ನಿಶಾನೆಗೊಳಪಡಿಸಲಾಯಿತು. ದಿನಾಂಕ 18-06-2018 ರಂದು ಕುಮಟಾ ಪೊಲೀಸ್ ಠಾಣೆಯವರು ನೀಡಿದ ಹಿಂಬರಹವನ್ನು ನಿ.ಪಿ. 12 ಎಂದು ಗುರುತಿಸಲಾಯಿತು.

ನನ್ನ ಸಾಕ್ಷಿ ವಿಚಾರಣೆ ಹಾಗೂ ದಾಖಲಾತಿಗಳ ಆಧಾರದ ಮೇಲೆ ದಾವೆಯಲ್ಲಿ ಕೋರಿರುವಂತೆ ಆದೇಶ ಮಾಡಬೇಕಾಗಿ ಪ್ರಾರ್ಥನೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ